

بِسْمِ اللّٰہِ الرَّحْمٰنِ الرَّحِیْمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 26–07–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَ أَشْهَدُ أَنَّ مُحَمَّدًا عَبْدُهُ وَ رَسُوْلُهُ- أَمَّا بَعْدُ

فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ-

اَلْحَمْدُ لِلّٰهِ رَبِّ الْعٰلَمِيْنَ ۙ الرَّحْمٰنِ الرَّحِيْمِ ۙ مٰلِكِ يَوْمِ الدِّيْنِ ؕ اِيَّاكَ نَعْبُدُ وَ اِيَّاكَ نَسْتَعِيْنُ ؕ

اِهْدِنَا الصِّرَاطَ الْمُسْتَقِيْمَ ۙ صِرَاطَ الَّذِيْنَ اَنْعَمْتَ عَلَيْهِمْ ۙ غَيْرِ الْمَغْضُوْبِ عَلَيْهِمْ وَ لَا الضَّآلِّيْنَ ؕ

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ಸಹ ಬದರೀ ಸಹಾಬರ ಬಗ್ಗೆಯೇ ಪ್ರಸ್ತಾಪಿಸುವೆನು. ಮೊದಲನೆಯ ಸಹಾಬಿಯ ಹೆಸರು ಹಝ್ರತ್ ಮುಝಾಹಿರ್ ಬಿನ್ ರಾಫಿಅ್(ರ). ಅವರ ಪಿತ ರಾಫಿಅ್ ಬಿನ್ ಅದಿ. ಹಝ್ರತ್ ಮುಝಾಹಿರ್ ಬದರ್ ಮತ್ತು ಅನಂತರದ ಇತರ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಮೃತರಾದರು. ಅವರ ಶಹಾದತ್ ಬಗ್ಗೆ ಹೀಗೆ ವಿವರಿಸಲಾಗಿದೆ: ಯಹ್‌ಯಾ ಬಿನ್ ಸಹ್ಲ್ ಬಿನ್ ಅಬೂ ಹಸ್ಮ ವರದಿ ಮಾಡುತ್ತಾರೆ: ಹಝ್ರತ್ ಮುಝಾಹಿರ್ ಸಿರಿಯಾದಿಂದ ಕೆಲವು ಶಕ್ತಿಶಾಲಿ ಕಾರ್ಮಿಕರನ್ನು ನನ್ನ ಪಿತನ ಬಳಿಗೆ ಕರೆದುಕೊಂಡು ಬರುತ್ತಿದ್ದರು. ಅವರ ಜಮೀನುಗಳಲ್ಲಿ ಕೆಲಸ ಮಾಡಿಸಲು. ಖೈಬರ್‌ಗೆ ಅವರು ತಲಪಿದಾಗ ಅಲ್ಲಿದ್ದ ಯಹೂದಿಯರು ಕಾರ್ಮಿಕರನ್ನು ಉತ್ತೇಜಿಸಿ ಹಝ್ರತ್ ಮುಝಾಹಿರ್‌ರನ್ನು ಕೊಲ್ಲಬೇಕೆಂದು ಹೇಳಿ ಎರಡು ಅಥವಾ ಮೂರು ಚೂರಿಗಳನ್ನು ರಹಸ್ಯವಾಗಿ ಕಾರ್ಮಿಕರಿಗೆ ಕೊಟ್ಟರು. ಹಾಗೆ ಅವರು ಖೈಬರ್‌ನಿಂದ ಹೊರಟು ಸಬಾರ್‌ಗೆ ತಲಪಿದಾಗ ಕಾರ್ಮಿಕರು ಹಝ್ರತ್ ಮುಝಾಹಿರ್‌ರನ್ನು ಆಕ್ರಮಿಸಿ ಚೂರಿಯಿಂದ ಹೊಟ್ಟೆಗೆ ತಿವಿದು ಅವರನ್ನು ಶಹೀದರನ್ನಾಗಿ ಮಾಡಿದರು. ಆ ಕಾರ್ಮಿಕರು ಖೈಬರಿಗೆ ಮರಳಿ ಹೋದಾಗ ಯಹೂದಿಯರು ಅವರಿಗೆ ದಾರಿ ಖರ್ಚು ಮತ್ತು ಆಹಾರ ನೀಡಿ ಅವರ ಊರಿಗೆ ಕಳುಹಿಸಿದರು. ಹಾಗೆ ಅವರು ವಾಪಸು ಸಿರಿಯಾ ತಲಪಿದರು. ಹಝ್ರತ್ ಉಮರ್ ಬಿನ್ ಖತ್ತಾಬರಿಗೆ ಈ ಸಮಾಚಾರ ಲಭಿಸಿದಾಗ ಹೇಳಿದರು: ನಾನು ಖೈಬರಿಗೆ ಹೊರಡಲಿರುವೆನು. ಅಲ್ಲಿರುವ ಸಂಪತ್ತನ್ನು ಹಂಚುವೆನು. ಅಲ್ಲಿನ ಭೂಮಿಯ ಗಡಿಗಳನ್ನು ನಿಶ್ಚಯಿಸುವೆನು. ಎಂದರೆ ಪ್ರತೀಕಾರ ಮಾಡುವೆನು ಮತ್ತು ಯಹೂದಿಯರನ್ನು ಅಲ್ಲಿಂದ ಗಡಿಪಾರು ಮಾಡುವೆನು. ಏಕೆಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಬಗ್ಗೆ ಹೇಳಿದ್ದರು – ಅಲ್ಲಾಹನು ನಿಮಗೆ ವಾಸಿಸಲು ಸ್ಥಳ ನೀಡದಿರುವಾಗ ನಾನು ನಿಮಗೆ ವಾಸಿಸಲು ಸ್ಥಳ ನೀಡಲಾರೆನು ಎಂದು. ಅಲ್ಲಾಹನು ಅವರನ್ನು ಗಡಿಪಾರು ಮಾಡಲು ಅನುಮತಿ ನೀಡಿರುವನು. ಅನಂತರ ಹಝ್ರತ್ ಉಮರ್(ರ) ಹಾಗೆಯೇ ಮಾಡಿದರು. ಹಝ್ರತ್ ಮುಝಾಹಿರ್ ಹಿಜರಿ ವರ್ಷ 20ರಲ್ಲಿ ಶಹೀದರಾದರು.

ನಾನು ಪ್ರಸ್ತಾಪಿಸುವ ಮುಂದಿನ ಸಹಾಬಿಯ ಹೆಸರು ಹಝ್ರತ್ ಮಾಲಿಕ್ ಬಿನ್ ಖದ್ದಾಮ(ರ). ಅವರ ಪಿತನ ಹೆಸರು ಖದ್ದಾಮ ಬಿನ್ ಅರ್‌ಫಜ. ಅವರು ಔಸ್ ಗೋತ್ರದ ಬನೂ ಗನಮ್ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರು ತನ್ನ ಸಹೋದರ ಮುಂಝಿರ್ ಬಿನ್ ಖದ್ದಾಮರೊಂದಿಗೆ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಖರೀಮ್ ಬಿನ್ ಫಾತಿಕ್(ರ). ಅವರು ಬನೂ ಅಸದ್‌ಗೆ ಸೇರಿದ್ದರು. ಅವರು ತಮ್ಮ ಸಹೋದರ ಹಝ್ರತ್ ಸಬ್ರ ಬಿನ್ ಫಾತಿಕ್ ಜೊತೆಗೆ ಬದರ್ ಯುದ್ಧದಲ್ಲಿ ಭಾಗವಹಿಸಿದರು. ಅನಂತರ ಹಝ್ರತ್ ಖರೀಮ್ ತನ್ನ ಪುತ್ರನೊಂದಿಗೆ ಕೂಫಕ್ಕೆ ಹೋಗಿ ರಖ್ಖ ನಗರದಲ್ಲಿ ವಾಸಿಸಲು ತೊಡಗಿದರು. ಅವರಿಬ್ಬರೂ ಅಮೀರ್ ಮುಆವಿಯರ ಆಡಳಿತೆ ಕಾಲದಲ್ಲಿ ನಿಧನ ಹೊಂದಿದರು.

ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಮುಅಮ್ಮರ್ ಬಿನ್ ಹಾರಿಸ್(ರ). ಅವರು ಖುರೈಶರ ಬನೂ ಜಂಅ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರ ಪಿತನ ಹೆಸರು ಹಾರಿಸ್ ಬಿನ್ ಮುಅಮ್ಮರ್. ಅವರ ತಾಯಿಯ ಹೆಸರು ಖತೀಲ ಬಿನ್ತ್ ಮಝ್‌ಊನ್ ಎಂದಾಗಿತ್ತು. ಆಕೆ ಹಝ್ರತ್ ಉಸ್ಮಾನ್ ಬಿನ್ ಮಝ್‌ಊನರ ಸಹೋದರಿಯಾಗಿದ್ದರು. ಹಝ್ರತ್ ಮುಅಮ್ಮರ್‌ಗೆ ಇಬ್ಬರು ಸಹೋದರರಿದ್ದರು. ಅವರ ಹೆಸರು ಹಾತಿಬ್ ಮತ್ತು ಹತ್ತಾಬ್. ಈ ಮೂವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರ್ ಅರ್‌ಖಮ್ ಪ್ರವೇಶಿಸುವ ಮೊದಲೇ ಮುಸ್ಲಿಮರಾಗಿದ್ದರು. ಆದುದರಿಂದ ಹಝ್ರತ್ ಮುಅಮ್ಮರ್ ಅಸ್ಸಾಬಿಖೂನಲ್ ಅವ್ವಲೂನ್‌ರ ಗುಂಪಿಗೆ ಸೇರಿದವರಾಗಿ ಗಣಿಸಲ್ಪಡುತ್ತಾರೆ. ಹಝ್ರತ್ ಆಯಿಶ ಬಿನ್ತ್ ಖದ್ದಾಮ ವರದಿ ಮಾಡುತ್ತಾರೆ: ಬನೂ ಮಝ್‌ಊನ್ ಕುಟುಂಬದಿಂದ ಹಝ್ರತ್ ಉಸ್ಮಾನ್, ಹಝ್ರತ್ ಖದ್ದಾಮ, ಹಝ್ರತ್ ಅಬ್ದುಲ್ಲ, ಹಝ್ರತ್ ಸಾಯಿಬ್ ಬಿನ್ ಉಸ್ಮಾನ್ ಬಿನ್ ಮಝ್‌ಊನ್ ಮತ್ತು ಹಝ್ರತ್ ಮುಅಮ್ಮರ್ ಬಿನ್ ಹಾರಿಸ್ ಮಕ್ಕದಿಂದ ಹಿಜ್‌ರತ್ ಮಾಡಿ ಮದೀನಕ್ಕೆ ಹೋದರು. ಅವರೆಲ್ಲರೂ ಅಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ಅಜ್‌ಲಾನಿಯ ಮನೆಯಲ್ಲಿ ವಾಸಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮುಅಮ್ಮರ್ ಮತ್ತು ಹಝ್ರತ್ ಮುಆಝ್ ಬಿನ್ ಅಫ್ರಾರವರ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದರು. ಹಝ್ರತ್ ಮುಅಮ್ಮರ್ ಬದರ್ ಉಹುದ್ ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಹಿಜರಿ ವರ್ಷ 23ರಲ್ಲಿ ನಿಧನ ಹೊಂದಿದರು.

ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಝುಹೀರ್ ಬಿನ್ ರಾಫಿಅ್(ರ). ಅವರು ಔಸ್ ಗೋತ್ರದ ಬನೂ ಹಾರಿಸ ಬಿನ್ ಹಾರಿಸ್ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರ ಪುತ್ರ ಉಸೈದ್ ಸಹ ಸಹಾಬಿಯಾಗಿದ್ದರು. ಅವರು ರಾಫಿಅ್ ಬಿನ್ ಖದೀಜ್‌ರ ಚಿಕ್ಕಪ್ಪನಾಗಿದ್ದರು. ಹಝ್ರತ್ ಝುಹೀರರ ಪತ್ನಿಯ ಹೆಸರು ಫಾತಿಮ ಬಿನ್ತ್ ಬಶರ್. ಆಕೆ ಬನೂ ಅದಿ ಬಿನ್ ಗನಮ್ ಕುಟುಂಬಕ್ಕೆ ಸೇರಿದ್ದಳು. ಹಝ್ರತ್ ಮುಝಾಹಿರ್ ಬಿನ್ ರಾಫಿಅ್ ಹಝ್ರತ್ ಝುಹೀದರ ಸಹೋದರರಾಗಿದ್ದರು. ಈ ಇಬ್ಬರು ಸಹೋದರರು ಬದರ್ ಯುದ್ಧದಲ್ಲಿ ಭಾಗವಹಿಸುವ ಭಾಗ್ಯ ಗಳಿಸಿದರು. ಹಝ್ರತ್ ಝುಹೀರ್ ಬೈಅತೆ ಅಖಬ ಸಾನಿಯದಲ್ಲೂ ಬದರ್, ಉಹುದ್ ಮತ್ತು ಅನಂತರ ಎಲ್ಲಾ ಯುದ್ಧಗಳಲ್ಲಿಯೂ ಭಾಗವಹಿಸಿದ್ದರು.

ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಅಮರ್ ಬಿನ್ ಅಯಾಸ್(ರ). ಅವರು ಯಮನಿನ ನಿವಾಸಿಯಾಗಿದ್ದು ಅನ್‌ಸಾರ್‌ಗಳ ಬನೂ ಲೌಝಾನ್ ಗೋತ್ರದೊಂದಿಗೆ ಪ್ರತಿಜ್ಞಾ ಬದ್ಧರಾಗಿದ್ದರು. ಅವರ ಪಿತ ಅಯಾಸ್ ಬಿನ್ ಅಮರ್. ಹಝ್ರತ್ ಅಯಾಸ್ ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಹಝ್ರತ್ ರಬೀಅ್ ಬಿನ್ ಅಯಾಸ್, ಹಝ್ರತ್ ವರಖ ಬಿನ್ ಅಯಾಸ್ ಇವರಿಬ್ಬರು ಅವರ ಸಹೋದರರಾಗಿದ್ದರು. ಈ ಮೂವರು ಸಹೋದರರಿಗೂ ಬದರ್ ಯುದ್ಧದಲ್ಲಿ ಭಾಗವಹಿಸಲು ಭಾಗ್ಯ ಲಭಿಸಿತು.

ಇನ್ನೊಬ್ಬ ಸಹಾಬಿ ಹಝ್ರತ್ ಮದ್‌ಲಜ್ ಬಿನ್ ಅಮರ್(ರ). ಅವರ ಹೆಸರು ಮದ್‌ಲಾಜ್ ಎಂದು ಸಹ ಹೇಳಲಾಗುತ್ತಿದೆ. ಅವರು ಬನೂ ಸಲೀಮ್ ಗೋತ್ರದ ಬನೂ ಹಿಜ್ರ್ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರು ತಮ್ಮ ಸಹೋದರರಾರ ಹಝ್ರತ್ ಸಖಫ್ ಬಿನ್ ಅಮರ್ ಮತ್ತು ಹಝ್ರತ್ ಮಾಲಿಕ್ ಬಿನ್ ಅಮರ್‌ರೊಂದಿಗೆ ಬದರ್ ಯುದ್ಧದಲ್ಲಿ ಭಾಗವಹಿಸಿದರು. ಹಝ್ರತ್ ಮದ್‌ಲಜ್ ಬದರ್, ಉಹುದ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಹಿಜರಿ ವರ್ಷ 50ರಲ್ಲಿ ಹಝ್ರತ್ ಅಮೀರ್ ಮುಆವಿಯರ ಆಡಳಿತದ ಕಾಲದಲ್ಲಿ ಮೃತರಾದರು.

ಮುಂದಿನ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಸುಹೈಲ್(ರ). ಅವರ ಪಿತನ ಹೆಸರು ಸುಹೈಲ್ ಬಿನ್ ಅಮರ್. ತಾಯಿಯ ಹೆಸರು ಖಾನಿತ ಬಿನ್ತ್ ಅಮರ್. ಅವರ ಸಹೋದರನ ಹೆಸರು ಅಬೂ ಜುಂದಲ್ ಎಂದಾಗಿತ್ತು. ಹಝ್ರತ್ ಅಬ್ದುಲ್ಲಾ ಬಿನ್ ಸುಹೈಲ್ ಅಬಿಸೀನಿಯಾದಿಂದ ಮರಳಿ ಬಂದಾಗ ಅವರನ್ನು ಅವರ ಪಿತ ಬಲಾತ್ಕಾರದಿಂದ ಹಿಡಿದು ಇಸ್ಲಾಮ್ ಧರ್ಮದಿಂದ ಬಿಡಿಸಿದರು. ಹಝ್ರತ್ ಅಬ್ದುಲ್ಲಾ ಬಿನ್ ಸುಹೈಲ್ ಅನಂತರ ಬಹುದೇವಾರಾಧಕರೊಂದಿಗೆ ಮುಸ್ಲಿಮರ ವಿರುದ್ಧ ಹೋರಾಡಲು ಬದರ್ ಕಡೆಗೆ ಬಂದಾಗ ಸೈನ್ಯಗಳು ಎದುರು ಬದುರಾಗಿ ನಿಂತಿತ್ತು. ಹಝ್ರತ್ ಅಬ್ದುಲ್ಲಾ ಮುಸ್ಲಿಮರ ಭಾಗಕ್ಕೆ ಬಂದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ಹಾಜರಾದರು. ಹಾಗೆ ಅವರು ಬದರ್ ಯುದ್ಧದಲ್ಲಿ ಮುಸ್ಲಿಮರಾಗಿ ಭಾಗವಹಿಸಿದರು. ಆಗ ಅವರ ಪ್ರಾಯ 27 ಆಗಿತ್ತು. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದರು. ಹಝ್ರತ್ ಅಬ್ದುಲ್ಲಾ ಮಕ್ಕ ವಿಜಯದ ದಿನ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ತನ್ನ ಪಿತನ ಸಂರಕ್ಷಣೆಯನ್ನು ಅಪೇಕ್ಷಿಸಿದರು. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು: ಓ ಅಲ್ಲಾಹನ ರಸೂಲರೇ, ತಾವು ನನ್ನ ತಂದೆಯವರಿಗೆ ರಕ್ಷಣೆ ನೀಡುವಿರೋ? ಹಝ್ರತ್ ಪೈಗಂಬರರು ಹೇಳಿದರು: ಅವರು ಅಲ್ಲಾಹನ ರಕ್ಷಣೆಯ ಕಾರಣ ಶಾಂತಿಯಿಂದ ಇದ್ದಾರೆ. ಅವರು ಹೊರಗೆ ಬರಲಿ. ಅನಂತರ ಹಝ್ರತ್ ಪೈಗಂಬರರು ತನ್ನ ಸುತ್ತುಮುತ್ತು ಇರುವವರೊಂದಿಗೆ ಹೇಳಿದರು: ಸುಹೈಲ್ ಬಿನ್ ಅಮರ್‌ರನ್ನು ನೋಡುವವರು ತಾತ್ಸಾರ ಭಾವನೆಯಿಂದ ಅವರನ್ನು ನೋಡಬಾರದು. ನನ್ನ ಜೀವಿತದ ಆಣೆ, ಖಂಡಿತವಾಗಿ ಸುಹೈಲ್ ಬುದ್ಧಿಶಾಲಿ ಮತ್ತು ಸಭ್ಯ ವ್ಯಕ್ತಿಯಾಗಿದ್ದಾರೆ. ಸುಹೈಲ್‌ನಂತಹ ವ್ಯಕ್ತಿ ಇಸ್ಲಾಮ್ ಬಗ್ಗೆ ತಿಳಿದುಕೊಳ್ಳದೆ ಇರಲು ಸಾಧ್ಯವಿಲ್ಲ. ಹಝ್ರತ್ ಅಬ್ದುಲ್ಲಾ ತನ್ನ ತಂದೆಯವರ ಬಳಿಗೆ ಹೋಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತುಗಳನ್ನು ತಿಳಿಸಿದರು. ಸುಹೈಲ್ ಹೇಳಿದರು: ಅಲ್ಲಾಹನಾಣೆ ಅವರು ಬಾಲ್ಯದಲ್ಲಿಯೂ ಅನಂತರವೂ ಸತ್ಕರ್ಮಿಯಾಗಿದ್ದರು. ಹಾಗೆ ಅಬ್ದುಲ್ಲಾರ ಪಿತ ಸುಹೈಲ್ ಮುಸ್ಲಿಮರಾದರು.

ಸುಹೈಲ್ ವಿಶ್ವಾಸಿಯಾದ ನಂತರ ಹೇಳಿದರು: ಅಲ್ಲಾಹನು ಇಸ್ಲಾಮಿನಲ್ಲಿ ನನ್ನ ಪುತ್ರನಿಗೆ ಬಹಳ ಹೆಚ್ಚು ಒಳಿತುಗಳನ್ನು ಇರಿಸಿರುವನು. ಹಝ್ರತ್ ಅಬ್ದುಲ್ಲಾ ಯಮಾಮ ಯುದ್ಧದಲ್ಲಿ ಸಹ ಭಾಗವಹಿಸಿದ್ದರು. ಅದೇ ಯುದ್ಧದಲ್ಲಿ ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲಿ ಹಿಜರಿ ವರ್ಷ ಹನ್ನೆರಡರಲ್ಲಿ ಅವರು ಶಹೀದರಾದರು. ಆಗ ಅವರ ಪ್ರಾಯ 38ವರ್ಷ. ಹಝ್ರತ್ ಅಬ್ದುಲ್ಲಾರವರ ಪಿತ ಅವರ ತಬ್ಲೀಗ್ ಪರಿಣಾಮವಾಗಿ ಬೈಅತ್ ಮಾಡಿದ್ದರು. ಹಝ್ರತ್ ಅಬೂಬಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹು ತಮ್ಮ ಖಿಲಾಫತ್ ಕಾಲದಲ್ಲಿ ಹಜ್‌ಗೋಸ್ಕರ ಮಕ್ಕಕ್ಕೆ ಹೋದಾಗ ಹಝ್ರತ್ ಸುಹೈಲ್ ಬಿನ್ ಅಮರ್ ಹಝ್ರತ್ ಅಬೂಬಕರರನ್ನು ಭೇಟಿಯಾಗಲು ಹೋಗಿದ್ದರು. ಆಗ ಹಝ್ರತ್ ಅಬೂಬಕರ್ ಹಝ್ರತ್ ಸುಹೈಲ್‌ರೊಂದಿಗೆ ಅವರ ಪುತ್ರನ ನಿಧನದ ಬಗ್ಗೆ ಸಂತಾಪ ಸೂಚಿಸಿದರು. ಆಗ ಹಝ್ರತ್ ಸುಹೈಲ್ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿರುವುದಾಗಿ ನಾನು ಕೇಳಿದ್ದೇನೆ: ಶಹೀದ್ ಆದ ವ್ಯಕ್ತಿ ತನ್ನ ಕುಟುಂಬದ ಎಪ್ಪತ್ತು ಜನರ ಪರವಾಗಿ ಶಾಫಾಅತ್ ಮಾಡುವನು ಎಂದು. ನಾನು ಭರವಸೆ ಹೊಂದಿದ್ದೇನೆ, ನನ್ನ ಪುತ್ರ ನನಗಿಂತ ಮುಂಚೆ ಬೇರೆ ಯಾರ ಹೆಸರನ್ನೂ ಶಫಾಅತ್‌ಗೆ ಪ್ರಾರಂಭಿಸಲಾರನು. ಇನ್ನೊಂದು ಅಭಿಪ್ರಾಯ ಹೀಗಿದೆ: ಹಝ್ರತ್ ಅಬ್ದುಲ್ಲಾ ಬಹರೈನಿನ ಜವಾಸಾದಲ್ಲಿ 88ನೇ ವಯಸ್ಸಿನಲ್ಲಿ ಶಹೀದರಾದರು. ಬಹರೈನಿನ ಜವಾಸಾದಲ್ಲಿ ಅಬ್ದುಲ್ ಖೈಸನ ಕೋಟೆ ಇದೆ. ಅದನ್ನು ಇಯ್‌ಲಾ ಬಿನ್ ಹಝ್ರಮಿ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಖಿಲಾಫತ್ ಕಾಲದಲ್ಲಿ ಹಿಜರಿ ವರ್ಷ 12ರಲ್ಲಿ ವಶಪಡಿಸಿಕೊಂಡಿದ್ದರು. ಅಂತೂ ಈ ರೀತಿ ಎರಡು ವರದಿಗಳಿವೆ.

ಇನ್ನೊಬ್ಬ ಸಹಾಬಿ ಹಝ್ರತ್ ಯಝೀದ್ ಬಿನ್ ಹಾರಿಸ್(ರ). ಅವರು ಖಝ್ರಜ್ ಗೋತ್ರದ ಬನೂ ಅಹ್‌ಮರ್ ಬಿನ್ ಹಾರಿಸ ಕುಟುಂಬಕ್ಕೆ ಸೇರಿದ್ದರು. ಅವರು ಬದರ್

ಯುದ್ಧದಲ್ಲಿ ಭಾಗವಹಿಸಿ ಆ ಯುದ್ಧದದಲ್ಲಿಯೇ ಶಹೀದರಾದರು. ಇನ್ನೊಬ್ಬ ಸಹಾಬಿ ಹಝ್ರತ್ ಉಮೈರ್ ಬಿನ್ ಹಮಾಮ್(ರ). ಅವರು ಖಝ್ರಜ್ ಗೋತ್ರದ ಬನೂ ಸಲ್ಮಾ ಶಾಖೆಯ ಬನೂ ಹರಾಮ್ ಬಿನ್ ಕಅಬ್ ಕುಟುಂಬದವರಾಗಿದ್ದರು. ಹಝ್ರತ್ ಉಮೈರ್ ಮತ್ತು ಹಝ್ರತ್ ಉಬೈದ ಬಿನ್ ಹಾರಿಸ್ ಮತ್‌ಲಬಿ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಲಾಗಿತ್ತು. ಇವರಿಬ್ಬರೂ ಬದರ್ ಯುದ್ಧದಲ್ಲಿ ಶಹೀದರಾದರು. ಬದರ್ ಯುದ್ಧದ ಸಂದರ್ಭದಲ್ಲಿ ಬಹುದೇವಾರಾಧಕರ ಸೈನ್ಯ ಸಮೀಪಿಸಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಭೂಮ್ಯಾಕಾಶಗಳಷ್ಟು ವಿಶಾಲವಾದ ಸ್ವರ್ಗಕ್ಕೋಸ್ಕರ ಮುಂದೆ ಸಾಗಿರಿ. ಹಝ್ರತ್ ಉಮೈರ್ ಹೇಳಿದರು: ಯಾ ರಸೂಲುಲ್ಲಾಹ್, ನೀವು ಹೇಳುವ ಸ್ವರ್ಗದ ವಿಸ್ತಾರ ಭೂಮ್ಯಾಕಾಶಗಳಷ್ಟು ಇದೆಯೇ? ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೌದೆಂದು ಹೇಳಿದಾಗ ಹಝ್ರತ್ ಉಮೈರ್ ವಾಹ್, ವಾಹ್ ಎಂದು ಹೇಳಿದರು. ನೀವು ಯಾಕೆ ಹಾಗೆ ಹೇಳಿದಿರಿ ಎಂದು ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದಾಗ ಹಝ್ರತ್ ಉಮೈರ್ ಹೇಳಿದರು: ಯಾ ರಸೂಲುಲ್ಲಾಹ್, ಅಲ್ಲಾಹನಾಣೆ ನಾನು ಸ್ವರ್ಗವಾಸಿಗಳಲ್ಲಿ ಒಬ್ಬನಾಗಬೇಕೆಂಬ ಆಶೆಯಿಂದ ಹಾಗೆ ಹೇಳುತ್ತಿದ್ದೇನೆ. ಹಝ್ರತ್ ಪೈಗಂಬರ್ ಹೇಳಿದರು: ನೀನು ಅದರ ನಿವಾಸಿಗಳಲ್ಲಿ ಒಬ್ಬನಾಗುವೆ. ಅನಂತರ ಹಝ್ರತ್ ಉಮೈರ್ ಅವಿಶ್ವಾಸಿಗಳೊಂದಿಗೆ ಹೋರಾಡಿ ಶಹೀದರಾದರು. ಅವರು ಬದರ್ ಯುದ್ಧದಲ್ಲಿ ಹೋರಾಡುವಾಗ ಹೀಗೆ ಹೇಳುತ್ತಿದ್ದರು: 'ಅಲ್ಲಾಹನ ಬಳಿಗೆ ಹೋಗುವಾಗ ತಖ್ವ ಮತ್ತು ಆಖಿರತ್ ಹೊರತು ದಾರಿ ಖರ್ಚಿಗೆ ಬೇರೇನನ್ನೂ ತೆಗೆದುಕೊಂಡು ಹೋಗುತ್ತಾ ಇಲ್ಲ. ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡುವಾಗ ಸ್ಥಿರವಾದ ಹೆಜ್ಜೆ ಹೊಂದಿರುತ್ತೇನೆ. ನಿಸ್ಸಂಶಯವಾಗಿ ತಖ್ವ ಅತ್ಯುತ್ತಮವಾಗಿದೆ. ಎಲ್ಲದಕ್ಕಿಂತಲೂ ಉತ್ತಮವಾದುದು ಹಿದಾಯತ್ ಕಡೆಗೆ ಮಾರ್ಗದರ್ಶನವಾಗಿದೆ. ಎಲ್ಲಾ ಜೀವಿಗಳು ನಾಶವಾಗುವವರೇ ಆಗಿದ್ದಾರೆ.' ಇಸ್ಲಾಮಿನಲ್ಲಿ ಅನ್‌ಸಾರ್ ವತಿಯಿಂದ ಪ್ರಥಮ ಶಹೀದರಾದವರು ಹಝ್ರತ್ ಉಮೈರ್ ಬಿನ್ ಹಮಾಮ್ ಆಗಿದ್ದಾರೆ. ಕೆಲವರ ಅಭಿಪ್ರಾಯ ಪ್ರಕಾರ ಹಝ್ರತ್ ಹಾರಿಸ ಬಿನ್ ಖೈಸ್ ಪ್ರಥಮ ಅನ್‌ಸಾರಿ ಶಹೀದ್ ಆಗಿದ್ದಾರೆ. ಹೀಗೆ ಎರಡು ವರದಿಗಳಿವೆ. ಅವರಿಬ್ಬರೂ ಬದರೀ ಶಹೀದರು ಆಗಿದ್ದರು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ.

ಇನ್ನೊಬ್ಬ ಸಹಾಬಿ ಹಝ್ರತ್ ಹಮೀದ್ ಅನ್‌ಸಾರಿ(ರ). ಹಝ್ರತ್ ಝುಬೈರ್ ಹೇಳುತ್ತಾರೆ: ಮದೀನದಲ್ಲಿ ಕಲ್ಲುಗಳಿರುವ ಭೂಮಿಯಲ್ಲಿ ಒಂದು ಚಿಕ್ಕ ನಾಲೆಯ ಮೂಲಕ ಹೊಲಗಳಿಗೆ ನೀರು ಹಾಯಿಸಲಾಗುತ್ತಿತ್ತು. ಅದಕ್ಕೆ ಸಂಬಂಧಿಸಿ ಅವರ ಮತ್ತು ಒಬ್ಬ ಅನ್‌ಸಾರಿಯ ಮಧ್ಯೆ ಜಗಳವಾಯಿತು. ಆ ಅನ್‌ಸಾರಿ ಬದರ್ ಯುದ್ಧದಲ್ಲಿ ಭಾಗವಹಿಸಿದವರಾಗಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಈ ಜಗಳವನ್ನು ತೀರ್ಮಾನಕ್ಕೋಸ್ಕರ ಒಯ್ಯಲಾಯಿತು. ಇಬ್ಬರ ಜಮೀನುಗಳಿಗೂ ಈ ನಾಲೆಯಿಂದ ನೀರು ಹಾಯಿಸಲಾಗುತ್ತಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಝ್ರತ್ ಝುಬೈರ್‌ರೊಂದಿಗೆ ಹೇಳಿದರು: ಝುಬೈರ್ ನೀನು ಮೊದಲು ನೀರು ಹಾಯಿಸು (ಏಕೆಂದರೆ ಅವರ ಹೊಲ ಮೊದಲು ಇತ್ತು). ಅನಂತರ ನಿನ್ನ ನೆರೆಹೊರೆಯವನ ಜಮೀನಿಗೆ ನೀರು ಬಿಟ್ಟುಕೊಡು. ಆಗ ಆ ಅನ್‌ಸಾರಿ ಆ ತೀರ್ಪು ಕೇಳಿ ಸಿಟ್ಟುಗೊಂಡರು. ಅವರು ಹೇಳಿದರು: ಯಾ ರಸೂಲುಲ್ಲಾಹ್, ನೀವು ಈ ರೀತಿ ತೀರ್ಪು ನೀಡಿದುದು ಆ ವ್ಯಕ್ತಿ ನಿಮ್ಮ ಪಿತೃ ಸಹೋದರಿ ಪುತ್ರನಾದ ಕಾರಣದಿಂದಾಗಿದೆ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖಚಹರೆ ಕೆಂಪಗಾಯಿತು. ಅವರು ಹಝ್ರತ್ ಝುಬೈರ್‌ನೊಂದಿಗೆ ಹೇಳಿದರು: ನಾನು ಮೊದಲು ಔದಾರ್ಯ ರೂಪದಲ್ಲಿ ಹೇಳಿದ್ದೆ. ಈಗ ಇದು ಹಕ್ಕುಗಳ ಬಗ್ಗೆ ಪ್ರಶ್ನೆಯಾಗಿದೆ. ನೀನು ನಿನ್ನ ಜಮೀನಿಗೆ ನೀರು ಹಾಯಿಸು ಮತ್ತು ಹೊಲಬದಿಯ ತಡೆಗಟ್ಟುಗಳು ತುಂಬುವ ತನಕ ನೀರನ್ನು ತಡೆದಿರಿಸು. ಅನಂತರ ಪಕ್ಕದ ಹೊಲಕ್ಕೆ ನೀರು ಬಿಡು. ಈ ರೀತಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝುಬೈರ್‌ರಿಗೆ ಅವರ ಪೂರ್ಣ ಹಕ್ಕು ನೀಡಿದರು. ಮೊದಲು ಅವರು ಹಝ್ರತ್ ಝುಬೈರರಿಗೆ ನೀಡಿದ ಸೂಚನೆ ಪ್ರಕಾರ ಅವರಿಗೆ ಮತ್ತು ಅನ್‌ಸಾರಿ ವ್ಯಕ್ತಿಗೆ ಅನುಕೂಲವಿತ್ತು. ಆದರೆ ಆ ಅನ್‌ಸಾರಿ ವ್ಯಕ್ತಿ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಿಟ್ಟಾಗುವಂತೆ ಮಾಡಿದಾಗ ಅವರು ಹಝ್ರತ್ ಝುಬೈರರಿಗೆ ಸ್ಪಷ್ಟವೂ ಸರಿಯೂ ಆಗಿರುವ ತೀರ್ಪು ನೀಡಿ ಅವರಿಗಿರುವ ಹಕ್ಕು ಪೂರ್ಣವಾಗಿ ಕೊಡಿಸಿದರು.

ಉರ್ವ ವರದಿ ಮಾಡುತ್ತಾರೆ: ಹಝ್ರತ್ ಝುಬೈರ್ ಹೀಗೆ ಹೇಳುತ್ತಿದ್ದರು: ಅಲ್ಲಾಹನಾಣೆ ಪವಿತ್ರ ಖುರ್‌ಆನಿನ ಈ ವಚನ ಈ ಘಟನೆಯ ಬಗ್ಗೆಯೇ ಅವತೀರ್ಣವಾಗಿದೆ ಎಂದು ನಾನು ಭಾವಿಸುತ್ತೇನೆ.

فَلَا وَرَبِّكَ لَا يُؤْمِنُونَ حَتَّىٰ يُحَكِّمُوكَ فِيمَا شَجَرَ بَيْنَهُمْ ثُمَّ لَا يَجِدُوا فِي أَنفُسِهِمْ حَرَجًا مِّمَّا قَضَيْتَ وَيُسَلِّمُوا تَسْلِيمًا

**ಫಲಾ ವ ರಬ್ಬಿಕ ಲಾ ಯೂಮಿನೂನ ಹತ್ತಾ ಯುಹಕ್ಕಿಮೂಕ ಫೀಮಾ ಶಜರ ಬೈನಹುಮ್ ಸುಮ್ಮ ಲಾ ಯಜಿದೂ ಫೀ ಅನ್‌ಫುಸಿಹಿಮ್ ಹರಜನ್ ಮಿಮ್ಮಾ ಖಝೈತ ವ ಯುಸಲ್ಲಿಮೂ ತಸ್‌ಲೀಮ.**

ಆದರೆ ಹಾಗಲ್ಲ. ನಿನ್ನ ಪ್ರಭುವಿನಾಣೆ ಅವರ ಮಧ್ಯೆ ಭಿನ್ನಾಭಿಪ್ರಾಯವುಳ್ಳ ವಿಚಾರದಲ್ಲಿ ಅವರು ನಿನ್ನನ್ನು ತೀರ್ಪುಗಾರನನ್ನಾಗಿ ಸ್ವೀಕರಿಸಿ, ನೀನು ತೀರ್ಪು ನೀಡಿದ ವಿಚಾರದ ಕುರಿತು ಅವರ ಹೃದಯಗಳಲ್ಲಿ ಯಾವ ಅಸಮಾಧಾನವೂ ಉಂಟಾಗದೆ ಅವರು ಪೂರ್ಣವಾಗಿ ವಿಧೇಯತೆ ತೋರಿಸುವ ವರೆಗೆ ಅವರು (ಯಥಾರ್ಥ) ವಿಶ್ವಾಸಿಗಳಾಗಲಿಕ್ಕಿಲ್ಲ. (4:66).

ಅಲ್ ಇಸಾಬ, ಅಸದುಲ್ ಗಾಬ ಮತ್ತು ಸಹೀಹ್ ಬುಖಾರಿಯ ವ್ಯಾಖ್ಯಾನ ಗ್ರಂಥವಾದ ಇರ್‌ಶಾದುಸ್ಸಾರಿ ಎಂಬ ಗ್ರಂಥಗಳಲ್ಲಿ ಹಝ್ರತ್ ಝುಬೈರ್‌ರೊಂದಿಗೆ ಜಗಳ ಮಾಡಿದ ಅನ್‌ಸಾರಿಯ ಹೆಸರು ಹಝ್ರತ್ ಹಮೀದ್ ಅನ್‌ಸಾರಿ ಎಂದು ಬರೆಯಲಾಗಿದೆ. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಒಟ್ಟಾರೆ ಹೇಳುವುದಾದರೆ ಕೆಲವು ಸಾರಿ ಶೈತಾನನು ರಹಸ್ಯವಾಗಿ ಆಕ್ರಮಣ ಮಾಡುತ್ತಾನೆ. ಆದರೆ ಬದರಿ ಸಹಾಬರನ್ನು ಕ್ಷಮಿಸುವುದಾಗಿ ಅಲ್ಲಾಹನು ಮೊದಲೇ ಪ್ರಕಟಿಸಿದ್ದಾನೆ.

ಇನ್ನೊಬ್ಬ ಸಹಾಬಿ ಹಝ್ರತ್ ಅಮರ್ ಬಿನ್ ಮುಆಝ್(ರ). ಅವರ ತಂದೆಯ ಹೆಸರು ಮುಆದ್ ಬಿನ್ ನುಅ್‌ಮಾನ್. ತಾಯಿ ಕಬ್‌ಶ ಬಿನ್ತ್ ರಾಫಿಅ್. ಅವರ ಮತ್ತು

ಹಝ್ರತ್ ಉಮೈರ್ ಬಿನ್ ಅಬೂ ವಖಾಸ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿತವಾಗಿತ್ತು. ಅವರು ತನ್ನ ಸಹೋದರ ಹಝ್ರತ್ ಸಅದ್ ಜೊತೆಗೆ ಬದರ್ ಯುದ್ಧದಲ್ಲಿ ಭಾಗವಹಿಸಿದರು. ಅವರು ಉಹುದ್ ಯುದ್ಧದಲ್ಲಿ ಶಹೀದರಾದರು. ಆಗ ಅವರ ಪ್ರಾಯ 32 ವರ್ಷ ಆಗಿತ್ತು.

0 ಇನ್ನೊಬ್ಬ ಸಹಾಬಿ ಹಝ್ರತ್ ಮಸ್ಊದ್ ಬಿನ್ ರಬೀಅ ಬಿನ್ ಅಮರ್(ರ). ಅವರು ಖಾರ ಗೋತ್ರದವರಾಗಿದ್ದರು. ಅವರು ಬನೂ ಝುಹ್ರ್ ಗೋತ್ರದೊಂದಿಗೆ ಪ್ರತಿಜ್ಞಾಬದ್ಧರಾಗಿದ್ದರು. ಅವರ ಪಿತನ ಹೆಸರು ರಬೀಅ್ ಎಂದೂ ರಬೀಅ ಎಂದೂ ಆಮಿರ್ ಎಂದೂ ಹೇಳಲಾಗುತ್ತಿದೆ. ಅವರ ಒಬ್ಬ ಪುತ್ರನ ಹೆಸರು ಅಬ್ದುಲ್ಲಾ ಎಂದಾಗಿತ್ತು. ಅವರ ಕುಟುಂಬವನ್ನು ಮದೀನದಲ್ಲಿ ಖಾರಿ ಎಂದು ಕರೆಯುತ್ತಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರ್ ಅರ್ಖಮ್ ಪ್ರವೇಶಿಸುವ ಮೊದಲೇ ಹಝ್ರತ್ ಮಸ್ಊದ್ ಮುಸ್ಲಿಮರಾಗಿದ್ದರು. ಅವರ ಮತ್ತು ಹಝ್ರತ್ ಉಬೈದ್ ಬಿನ್ ತೈಹಾನ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಲಾಗಿತ್ತು. ಅವರು ಬದರ್, ಉಹುದ್, ಖಂದಕ್ ಮತ್ತು ಇತರ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಹಿಜರಿ ವರ್ಷ 30ರಲ್ಲಿ ನಿಧನ ಹೊಂದುವಾಗ ಅವರ ಪ್ರಾಯ 60 ವರ್ಷಕ್ಕಿಂತ ಹೆಚ್ಚಿಗೆ ಇತ್ತು.

ಅಲ್ಲಾಹನು ಈ ಎಲ್ಲಾ ಸಹಾಬರ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ. ಅವರ ಒಳಿತುಗಳನ್ನು ನಾವು ಸಹ ಜಾರಿಯಲ್ಲಿರಿಸುವವರಾಗೋಣ — ಆಮೀನ್.

ಇನ್ನು ನಾನು ಸಂಕ್ಷಿಪ್ತವಾಗಿ ಹೇಳಲು ಇಚ್ಛಿಸುತ್ತೇನೆ. ಮುಂದಿನ ಜುಮುಅ ದಿನ ಇನ್ಶಾಅಲ್ಲಾಹ್ ಬ್ರಿಟನಿನ ಜಲ್ಸ ಸಾಲಾನ ಪ್ರಾರಂಭವಾಗುವುದು. ಅದು ಎಲ್ಲ ರೀತಿಯಲ್ಲೂ ಅನುಗ್ರಹಭರಿತವಾಗಲು ಪ್ರಾರ್ಥಿಸಿರಿ. ಅಲ್ಲಾಹನು ಎಲ್ಲಾ ರೀತಿಗಳಲ್ಲೂ ಅದನ್ನು ಅನುಗ್ರಹಪೂರ್ಣ ಗೊಳಿಸಲಿ. ಜಲ್ಸದ ಡ್ಯೂಟಿಯಲ್ಲಿರುವವರು ತಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳೊಂದಿಗೆ ತಮ್ಮ ಡ್ಯೂಟಿಗಳನ್ನು ಈಡೇರಿಸಲು ಪ್ರಯತ್ನಿಸಿರಿ ಮತ್ತು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ ಸರಿಯಾದ ರೀತಿಯಲ್ಲಿ ಡ್ಯೂಟಿ ಮಾಡಲು ಅಲ್ಲಾಹನು ಭಾಗ್ಯ ದಯಪಾಲಿಸಲಿ ಎಂದು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಉತ್ತಮ ರೀತಿಯಲ್ಲಿ ಸೇವೆ ಮಾಡುವ ಭಾಗ್ಯ ಅಲ್ಲಾಹನು ನೀಡುವವನಾಗಲಿ. ಈ ವರ್ಷ ಟ್ರಾನ್ಸ್‌ಪೋರ್ಟ್ ವಿಭಾಗದವರು ಹೆಚ್ಚು ಕೆಲಸ ಮಾಡಲಿಕ್ಕಿದೆ. ಪ್ಲಾನಿಂಗ್ ಸಹ ಮಾಡಬೇಕು. ಇಲ್ಲಿ ಜಮಾಅತಿನ ವಾಸ್ತವ್ಯ ಸ್ಥಳಗಳಲ್ಲಿ ವಾಸಿಸುವವರನ್ನು ಜಲ್ಸಕ್ಕೆ ಕರೆದುಕೊಂಡು ಹೋಗಲು ಮತ್ತು ಅನಂತರ ಕರೆದುಕೊಂಡು ಬರುವ ವ್ಯವಸ್ಥೆ ಮಾಡಬೇಕು. ಇದಕ್ಕೋಸ್ಕರ ಪ್ಲಾನಿಂಗ್ ಮಾಡಲು ಅಫ್ಸರ್ ಜಲ್ಸ ಸಾಲಾನರೊಂದಿಗೆ ನಾನು ಹೇಳಿರುವೆನು. ಈ ಕೆಲಸ ಪ್ರಾರಂಭವಾಗಿರಬಹುದೆಂಬ ಪ್ರತೀಕ್ಷೆ ಇದೆ. ಎಲ್ಲಾ ಕೆಲಸಗಳನ್ನು ಅತ್ಯುತ್ತಮವಾಗಿ ನೇರವೇರಿಸಲು ಅಲ್ಲಾಹನು ಎಲ್ಲರಿಗೂ ಭಾಗ್ಯ ನೀಡಲಿ – ಆಮೀನ್.

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَنَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ - عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَآءِ ذِي الْقُرْبٰى وَ يَنْهٰى
عَنِ الْفَحْشَآءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ -

——————————*****——————————

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London, UK. On 26-07-2019.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim |***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon